ಕರ್ನಾಟಕ ಸರ್ಕಾರ

**ತಾಂತ್ರಿಕ ಶಿಕ್ಷಣ ಇಲಾಖೆ**

ಸಂಖ್ಯೆ: ಡಿಟಿಇ 02 ಇಜಿಯು 2016

ನಿರ್ದೇಶಕರವರ ಕಛೇರಿ
ಅರಮನೆ ರಸ್ತೆ
ಬೆಂಗಳೂರು-560 001
ದಿನಾಂಕ: 04-08-2016

**ಜ್ಞಾಪನ**

ವಿಷಯ: ಎನ್ಐಸಿ ಸಿದ್ಧಪಡಿಸಿರುವ **ಇ**-ಗ್ರಂಥಾಲಯ ತಂತ್ರಾಂಶವನ್ನು ಬಳಸುವ ಬಗ್ಗೆ.

ಉಲ್ಲೇಖ: 1. ಇ-ಮೇಲ್ ಮುಖಾಂತರ ಎನ್ಐಸಿಯೊಂದಿಗೆ ಪತ್ರ ವ್ಯವಹರಿಸಲಾಗಿದೆ.

*-*-*-*

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ಎನ್ಐಸಿ ಸಿದ್ದಪಡಿಸಿರುವ **ಇ**-ಗ್ರಂಥಾಲಯ ತಂತ್ರಾಂಶವನ್ನು ತಾಂತ್ರಿಕ ಶಿಕ್ಷಣ ಇಲಾಖೆಗೆ ಒಳಪಡುವ ಎಲ್ಲಾ ಸರ್ಕಾರಿ ಪಾಲಿಟೆಕ್ನಿಕ್/ ಸರ್ಕಾರಿ ಇಂಜಿನಿಯರಿಂಗ್ ಕಾಲೇಜುಗಳಲ್ಲಿ ಬಳಸುವಲ್ಲಿ ಎನ್ಐಸಿ ಸಂಸ್ಥೆಯ ಹಿರಿಯ ತಾಂತ್ರಿಕ ನಿರ್ದೇಶಕರು ಸಹಕರಿಸಲು ಮುಂದಾಗಿರುತ್ತಾರೆ. ಈ ಸಂಬಂಧ ಎನ್ಐಸಿಯೊಂದಿಗೆ ಸಂಯೋಜಿಸಲು ಇಲಾಖೆಯ ಗ್ರಂಥಾಲಯ ವಿಭಾಗದ ಹಿರಿಯ ಅಧಿಕಾರಿಯೊಬ್ಬರನ್ನು ನಿಯೋಜಿಸಲು ತಿಳಿಸಿರುತ್ತಾರೆ.

ಆದ್ದರಿಂದ ಶ್ರೀಮತಿ ಮೀರಾಬಾಯಿ ಮುಖ್ಯ ಗ್ರಂಥಪಾಲಕರು/ ಪ್ರಾಚಾರ್ಯರು, ಸ್ಟೆರಿಕ್, ಬೆಂಗಳೂರು, ಇವರು ಸದರಿ ತಂತ್ರಾಂಶವನ್ನು ಅಳವಡಿಸಲು ಎನ್ಐಸಿ ಸಿಬ್ಬಂದಿಯವರನ್ನು ಸಂಪರ್ಕಿಸಿ ಮಾಹಿತಿ ಪಡೆದು, ಇಲಾಖೆಯ ಎಲ್ಲಾ ಸರ್ಕಾರಿ ಪಾಲಿಟೆಕ್ನಿಕ್/ ಸರ್ಕಾರಿ ಇಂಜಿನಿಯರಿಂಗ್ ಕಾಲೇಜುಗಳಲ್ಲಿನ ಗ್ರಂಥಪಾಲಕರುಗಳಿಗೆ ತಂತ್ರಾಂಶದ ತರಬೇತಿಯನ್ನು ಆಯೋಜಿಸುವ ಬಗ್ಗೆ ಪರಿಶೀಲಿಸಿ 15 ದಿನಗೊಳಗಾಗಿ ನಿರ್ದೇಶನಾಲಯಕ್ಕೆ ವರದಿ ಸಲ್ಲಿಸಬೇಕೆಂದು ಈ ಮೂಲಕ ತಿಳಿಸಲಾಗಿದೆ.

ನಿರ್ದೇಶಕರು

ಇವರಿಗೆ,

ಶ್ರೀಮತಿ ಮೀರಾಬಾಯಿ.,
ಮುಖ್ಯ ಗ್ರಂಥಪಾಲಕರು/ ಪ್ರಾಚಾರ್ಯರು,
ಸ್ಟೆರಿಕ್ ಸಂಸ್ಥೆ,
ಬೆಂಗಳೂರು.

ಪ್ರತಿ:

1. ಎಲ್ಲಾ ಸರ್ಕಾರಿ ಪಾಲಿಟೆಕ್ನಿಕ್/ ಸರ್ಕಾರಿ ಇಂಜಿನಿಯರಿಂಗ್ ಕಾಲೇಜುಗಳ ಪ್ರಾಚಾರ್ಯರು/ ಗ್ರಂಥಪಾಲಕರುಗಳಿಗೆ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ.
2. ಆಡಳಿತಾಧಿಕಾರಿ ತಾಶಿನಿ.
3. ನಿರ್ದೇಶಕರ ಆಪ್ತ ಶಾಖೆಗೆ.